| | | |
|---|---|---|
| ಓ ಎಸ್ | 48/2014 | ಪಿ.ಡಬ್ಲ್ಯೂ 1 |

ಇಂದು ದಿಃ 10/08/2021 ರಂದು ಸಾಕ್ಷಿಯನ್ನು ಕರೆಯಿಸಲಾಯಿತು. ಪ್ರಮಾಣ ವಚನ ಬೋದಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ 16 ಮತ್ತು 17 ರ ವಾರಸುದಾರರ ಪರ ಶ್ರೀ ಎಂ.ಎಂ. ವಕೀಲರಿಂದಃ-

ನಾನು ಮಂಡಕಳ್ಳಿಯಲ್ಲಿ ವಾಸವಿದ್ದೇನೆ. ದಾವಾ ಆಸ್ತಿ ಹೆಬ್ಯ ಗ್ರಾಮಾದಲ್ಲಿ ಇದೆ. ಸದರಿ ಹೆಬ್ಯ ಗ್ರಾಮ ನಂಜನಗೂಡು ತಾಲ್ಲೂಕಿನಲ್ಲಿ ಎಂದರೆ ನಿಜ. ಮಂಡಕಳ್ಳಿ ಗ್ರಾಮವು ಮೈಸೂರು ತಾಲ್ಲೂಕಿಗೆ ಸೇರುತ್ತದೆ ಎಂದರೆ ನಿಜ. ಹೆಬ್ಯ ಗ್ರಾಮದ ಆಸ್ತಿಗಳ ವಿವರ ನನಗೆ ಖುದ್ದಾಗಿ ಗೊತ್ತಿಲ್ಲ ಎಂದರೆ ನಿಜ. ನನಗೆ ಈಗ 41 ವರ್ಷ ವಯಸ್ಸಾಗಿದೆ. ವಾದಿ ಜಯಲಕ್ಷ್ಮಿ ನನ್ನ ಅಕ್ಕ. ನಾರಾಯಣ ನನ್ನ ತಮ್ಮ. ರಂಗರಾಜು ನನ್ನ ತಮ್ಮ. ನಾನು ಮಾದಮ್ಮರವರನ್ನು ನೋಡಿದ್ದೇನೆ. ಮಾದಮ್ಮರವರು ಕ್ರಯಕ್ಕೆ ಕೊಟ್ಟಾಗ ನಾವು ಯಾರೂ ಹುಟ್ಟಿರಲಿಲ್ಲ ಎಂದರೆ ಸರಿಯಲ್ಲ. 16 ಮತ್ತು 17 ನೇ ಪ್ರತಿವಾದಿಯರಾದ ಚಿಕ್ಕರಾಮ ಶೆಟ್ಟಿ ಹಾಗೂ ರಾಮಶೆಟ್ಟಿ ರವರನ್ನು ನಾನು ನೋಡಿಲ್ಲ. ಅವರಿಗೆ ಯಾವ ವರ್ಷ ಕ್ರಯ ಪತ್ರ ಆಗಿದ್ದು ಎಂದು ಗೊತ್ತು. ಸಾಕ್ಷಿ ಸ್ವತಃ ನುಡಿಯುತ್ತಾರೆ ಯಾರು ಕ್ರಯಕ್ಕೆ ಕೊಟ್ಟಿದ್ದು ಗೊತ್ತಿಲ್ಲ. 1974 ರಲ್ಲಿ 16 ಮತ್ತು 17 ನೇ ಪ್ರತಿವಾದಿಯವರಿಗೆ ಮಾದಮ್ಮರವರು ನೋಂದಾಯಿತ ಕ್ರಯ ಪತ್ರ ಮಾಡಿಕೊಟ್ಟಿರುವುದು ಎಂದರೆ ಸರಿಯಲ್ಲ. ಆ ಸಮಯ ನಾನು ಜನಿಸಿರಲಿಲ್ಲ ಎಂದರೆ ಸರಿಯಲ್ಲ. ಸದರಿ ಕ್ರಯ ಪತ್ರ ಆಗಿ 47 ವರ್ಷ ಆಗಿರುವುದರಿಂದ ನನಗೆ 41 ವರ್ಷ ಆಗಿದೆ ಎಂದು ಹೇಳಿರುವುದರಿಂದ ಕ್ರಯ ಪತ್ರ ಆದ ಸಮಯ ನಾನು ಜನಿಸಿರಲಿಲ್ಲ ಎಂದರೆ ನಿಜ. ಎಷ್ಟು ಹಣಕ್ಕೆ ಸದರಿ ಸ್ವತ್ತನ್ನು ಮಾರಾಟ ಮಾಡಿರುವುದು ಎಂಬುದನ್ನು ನಾನು ನೋಡಿಲ್ಲ ಎಂದರೆ ನಿಜ. ಮಾದಮ್ಮರವರ ಮುಬೈ ಸಾಲ ತೀರಿಸಲು ಹಾಗೂ ಕುಟುಂಬ ನಿರ್ವಹಣೆಗಾಗಿ ಮಾರುಕಟ್ಟೆ ಮೌಲ್ಯಕ್ಕೆ ಅದನ್ನು

ಮಾರಾಟ ಮಾಡಿರುವುದು ಎಂದರೆ ಸರಿಯಲ್ಲ. ಜಮೀನಿನ ಬೆಲೆಗಳು ಹೆಚ್ಚಾಗಿರುವುದರಿಂದ ಸುಳ್ಳು ಕೇಸು ಹಾಕಿರುವುದು ಎಂದರೆ ಸರಿಯಲ್ಲ.

ಮಾದಮ್ಮ ನನ್ನ ಸಂಬಂದಿಕರು ಎಂದು ಹೇಳಿರುವುದು ರುಜುವಾತು ಪಡಿಸಲು ದಾಖಲೆ ಹಾಜರು ಪಡಿಸಿದ್ದೇನೆಯೇ ಎಂದು ಕೇಳಿದರೆ ಇಲ್ಲ ಎಂದು ನುಡಿಯುತ್ತೇನೆ. ನನಗೂ ಮಾದಮ್ಮ ರಿಗೂ ಯಾವುದೇ ಸಂಬಂದವಿಲ್ಲ ವಾದರು ನಾವು ಬೇರೆ ಬೇರೆ ಗ್ರಾಮದವರಾಗಿದ್ದರೂ ಸುಳ್ಳು ಸಾಕ್ಷಿ ಹೇಳಲು ಬಂದಿರುವುದು ಎಂದರೆ ಸರಿಯಲ್ಲ. ದಾವಾ ಸ್ವತ್ತು ಯಾವ ಸ.ನಂ. ಎಲ್ಲಿದೆ ಹಾಗೂ ಯಾರ ಸ್ವಾದೀನದಲ್ಲಿದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ಖರೀದಿ ಮಾಡಿದಾಗಿನಿಂದ ದಾವಾ ಸ್ವತ್ತನ್ನು ಅಬಿವೃದ್ದಿ ಪಡಿಸಿ ಉತ್ತಮಗೊಳಿಸಿದ್ದಾರೆ ಎಂದರೆ ಸರಿಯಲ್ಲ. 16 ಮತ್ತು 17 ನೇ ಪ್ರತಿವಾದಿಯರು ಹೆಬ್ಬೆ ಗ್ರಾಮದಲ್ಲಿ ವಾಸವಿರುವ ಕುರಿತಂತೆ ಅವರ ಜಾತಿಯವರು ಆ ಊರಿನಲ್ಲಿ ಬೇರೆ ಯಾರೂ ಇಲ್ಲ ಎಂದರೆ ನಿಜ. ಅದನ್ನು ದುರುಪಯೋಗ ಪಡಿಸಿ ಅವರನ್ನು ಹೆದರಿಸಿ ಸುಳ್ಳು ದಾವೆ ಸಲ್ಲಿಸಿರುವುದು ಎಂದರೆ ಸರಿಯಲ್ಲ. ದಾವಾ ಆಸ್ತಿ ಮೇಲೆ ನಮಗೆ ಯಾವುದೇ ಹಕ್ಕು ಹಿತಾಸಕ್ತಿ ಇಲ್ಲ ಎಂದರೆ ಸರಿಯಲ್ಲ. ಸುಳ್ಳು ಪ್ರಮಾಣ ಪತ್ರ ಸಲಿಸಿ ಸುಳ್ಳು ಸಾಕ್ಷಿ ಹೇಳುತ್ತಿರುವುದು ಎಂದರೆ ಸರಿಯಲ್ಲ.

ಪಾಟೀ ಸವಾಲು ಃ 12 ನೇ ಪ್ರತಿವಾದಿ ಪರ ಶ್ರೀ ಪಿ ಎಂ ವಕೀಲರಿಂದ, ಯಾವುದೇ ಕೋರಿಕೆವಿಲ್ಲವಾದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು.

ಮರು ವಿಚಾರಣೆ ಃ ಇಲ್ಲ

ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸ.ಇದೆ.

ಹಿರಿಯ ಸಿವಿಲ್

ನ್ಯಾಯಾಧೀಶರು

ಮತ್ತು ಜೆ ಎಂ ಎಫ್ ಸಿ., ನಂಜನಗೂಡು.